# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ:ಆ-1:123:ಕರಾಆ:2021

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನಸೌಧ,
ಬೆಂಗಳೂರು-560 001,ದಿನಾಂಕ:12.08.2024.

## ಸುತ್ತೋಲೆ

**ವಿಷಯ:** '**ಸ್ವಾತಂತ್ರ್ಯ ದಿನಾಚರಣೆ**'ಯನ್ನು ಆಚರಿಸುವ ಕುರಿತು.

******

ಕರ್ನಾಟಕ ವಿಧಾನ ಮಂಡಲದ ವತಿಯಿಂದ ದಿನಾಂಕ:15.08.2024ರ ಗುರುವಾರದಂದು '**ಸ್ವಾತಂತ್ರ್ಯ ದಿನಾಚರಣೆ**' ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಅಂದು ಬೆಳಿಗ್ಗೆ: 08.45 ಗಂಟೆಗೆ ಶಾಸಕರ ಭವನ-1ರ ಮುಂಭಾಗದಲ್ಲಿ ಧ್ವಜಾರೋಹಣ ಮಾಡಿ ನಂತರ ಮೆರವಣಿಗೆ ಮೂಲಕ ವಿಧಾನಸೌಧದ ಪೂರ್ವದ್ವಾರದಲ್ಲಿರುವ ಭವ್ಯ ಮೆಟ್ಟಿಲುಗಳ ಮೇಲೆ ಧ್ವಜಾರೋಹಣವನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಮತ್ತು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು ನೆರವೇರಿಸಲಿದ್ದಾರೆ. ತದನಂತರ, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಧಾನ ಮಂಡಲದ ಅಧಿಕಾರಿ/ನೌಕರರುಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಆದುದರಿಂದ, ಮೇಲ್ಕಂಡ ದಿನಾಂಕದಂದು ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳು ಬೆಳಿಗ್ಗೆ: 08.30 ಗಂಟೆಗೆ ಶಾಸಕರ ಭವನ-1ರ ಮುಂಭಾಗದಲ್ಲಿ ಹಾಜರಾಗಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ನಂತರ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕೆಂದು ಹಾಗೂ ಕಾರ್ಯಕ್ರಮ ಮುಗಿದ ನಂತರ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ತೆರಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

(ಅನಸೂಯಮ್ಮ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ಗೆ,**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ,
(ಶಾಸಕರ ಭವನವೂ ಸೇರಿದಂತೆ)

**ಪ್ರತಿಗಳು** :-

1. ಮಾನ್ಯ ಸಭಾಪತಿಯವರ/ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯವರುಗಳಿಗೆ, ಕವಿಮಂ.
2. ಮಾನ್ಯ ಉಪ ಸಭಾಪತಿಯವರ/ಮಾನ್ಯ ಉಪ ಸಭಾಧ್ಯಕ್ಷರವರ ಆಪ್ತ ಕಾರ್ಯದರ್ಶಿಯವರುಗಳಿಗೆ, ಕವಿಮಂ.
3. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರುಗಳಿಗೆ, ಕವಿಮಂ.
4. ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರುಗಳಿಗೆ, ಕವಿಮಂ.
5. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರುಗಳಿಗೆ, ಕವಿಮಂ.
6. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ,
7. ಕಾರ್ಯದರ್ಶಿಯರವರ ಆಪ್ತ ಸಹಾಯಕರಿಗೆ, ಕವಿಸ.
8. ಅಪರ/ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರಿಗೆ, ಕವಿಮಂ..
9. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಗಣಕ ಕೇಂದ್ರ, ಕವಿಪ. ಕವಿಸ.
10. ಕರ್ನಾಟಕ ವಿಧಾನ ಪರಿಷತ್ ಹಾಗೂ ಶಾಸಕರ ಭವನದ ಸೂಚನಾ ಫಲಕಗಳಿಗೆ.
11. ಸಂಬಂಧಪಟ್ಟ ಕಡತಕ್ಕೆ / ರಕ್ಷಾ ಕಡತಕ್ಕೆ / ಕವಿಪ.

**ವಿಶೇಷ ಸೂಚನೆ: ಬೆಳಿಗ್ಗೆ ಲಘು ಉಪಹಾರವನ್ನು ಮತ್ತು ಮಧ್ಯಾಹ್ನ ಲಘು ಭೋಜನವನ್ನು ಏರ್ಪಡಿಸಲಾಗಿದೆ.**